1994-95	3393
1995-96	3495

ಆ) ಇದೇ ರಾಜ್ಯಕ್ಕೆ ಸಂಬಂಧಪಟ್ಟಂತೆ ಪ್ರತಿಭೆ ಆಧಾರದ ಮೇಲೆ ಪ್ರವೇಶ ನೀಡುತ್ತಿರುವುದರಿಂದ ವಿಭಾಗವಾರು ವಿವರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) "ಇ" ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಸೋಮವಾರ ಪೇಟೆ ಅರಣ್ಯ ಇಲಾಖೆಯಲ್ಲಿ ಮರಗಳನ್ನು ಹರಾಜು ಮಾಡದಿರುವ ಬಗ್ಗೆ.

737 - ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದ ಸುತ್ತಮುತ್ತ ಅರಣ್ಯ ಇಲಾಖೆಯ ವಿಪ್ರೀಗಳಲ್ಲಿ ಮರಗಳನ್ನು ಹರಾಜು ಮಾಡಲು ಬಿಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಎಷ್ಟು ಬಲೆ ಬಾಳುವ ಮರ ಕೊಡಗು ಜಿಲ್ಲೆಯ ವಿಪ್ರೀಗಳಲ್ಲಿ ಇದೆ?

ಈ) ಅರಣ್ಯ ಇಲಾಖೆಯಲ್ಲಿ ಶ್ರೀಗಂಧದ ಮರಗಳ ಕಳ್ಳಸಾಗಾಣಿಕೆ ಮಾಡುವಾಗ ಸಿಕ್ಕಿಬಿದ್ದ ವಾಹನಗಳು, ಕಾರು, ಜೀಪು, ಇತ್ಯಾದಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆಯೇ?

ಉ) ಈ ರೀತಿ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಸಂಖ್ಯೆ ಎಷ್ಟು?

ಊ) ಇಂತಹ ವಾಹನಗಳನ್ನು ಸರ್ಕಾರ ಸಾರ್ವಜನಿಕ ಹರಾಜು ಮಾಡಿ ಮಾರಲಾಗಿದೆಯೇ ಇದರಿಂದ ಬಂದ ಹಣವೆಷ್ಟು? ಪೂರ್ಣ ವಿವರವೇನು ಒದಗಿಸುವುದು.

ಶ್ರೀ ಬಿ. ವೈ. ಮೋಟಿ (ಅರಣ್ಯ ಸಚಿವರು) :

ಅ) ಹೌದು.

ಆ) ಕೊಡಗು ಜಿಲ್ಲೆಯಲ್ಲಿ ಅನಧಿಕೃತವಾಗಿ ಜಾಗಗಳಲ್ಲಿ ಮರಗಳನ್ನು ತೆಗೆಯಲು ಒಂದು ನೀತಿಯನ್ನು ಮಾಡಿದೆ ಇರುವುದರಿಂದ ಕೊಡಗು ಜಿಲ್ಲಾ ಸಣ್ಣ ಬೆಳೆಗಾರರ ಸಂಘದವರು ಹಾಗೂ ಮರ ವ್ಯಾಪಾರಿಗಳು ಕೊಡಲು ಜಿಲ್ಲೆ ಅನಧಿಕೃತವಾಗಿ ಜಾಗದಲ್ಲಿ ಕಡಿತಲೆ ಮತ್ತು ಮರಗಳನ್ನು ತೆಗೆಯಲು ಸರ್ಕಾರವು ನೀತಿ ನಿರೂಪಣೆ ಬಯಸಿ ಹರಾಜಿಗೆ ತಡೆಯೊಡ್ಡಿರುತ್ತಾರೆ. ಅನಧಿಕೃತವಾಗಿ ಜಾಗಗಳಲ್ಲಿ ಮರಗಳನ್ನು ತೆಗೆಯುವ ಬಗ್ಗೆ ನೀತಿ ನಿರೂಪಣೆ ಮಾಡುವ ಬಗ್ಗೆ ಸಮಯಾನುಸಾರ ಪರಿಶೀಲಿಸಿ ಕ್ರಮ

ತೆಗೆದುಕೊಳ್ಳಲಾಗುವುದು. ಸದರಿ ಬಹಿರಂಗ ಹರಾಜನ್ನು ಪುನಃ 14-3-96 ರಂದು ನಡೆಸಲು ದಿನಾಂಕವನ್ನು ನಿಗದಿಪಡಿಸಲಾಗಿದೆ.

(ಗ) ಕೊಡಗು ವೃತ್ತದ ಮಡಿಕೇರಿ ಮತ್ತು ವೀರಾಜಪೇಟೆ ವಿಭಾಗಗಳಲ್ಲಿ ಈಗ ಸುಮಾರು ರೂ. 5 ಕೋಟಿ ಬೆಲೆ ಬಾಳುವ ಮರಗಳ ದಾಸ್ತಾನು ದಿಪೋಗಳಲ್ಲಿ ಇರುತ್ತದೆ.

(ಘ) ಹೌದು.

(ಙ) ಕಳೆದ ಮೂರು ವರ್ಷಗಳಲ್ಲಿ ಕೊಡಗು ವೀರಣ್ಯ ವೃತ್ತದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ವಾಹನಗಳ ವಿವರ ಈ ಕೆಳಗಿನಂತಿದೆ.

ವಾಹನಗಳು	93-94	94-95	95-96 (ಫೆಬ್ರುವರಿ 96ರವರೆಗೆ)
ಕಾರು	30	29	28
ಟೆಂಪೋ	4	3	3
ಮೋಟಾರ್ ಸೈಕಲ್	2	6	7
ಸ್ಕೂಟರ್	15	4	7
ಜೈಕ್	2	-	1
ಜೀಪು	9	12	12
ಲಾರಿ	7	7	-
ಮಿನಿಲಾರಿ	-	-	13
ಆಟೋ	5	4	4
ಮರದ ದೋಣಿ	-	1	-
ಬೈಸಿಕಲ್	-	2	-
ಟ್ರ್ಯಾಕ್ಟರ್	-	1	-
ಒಟ್ಟು	68	69	75

ಊ) ಕೊಡಗು ವೃತ್ತದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳನ್ನು ಬಹಿರಂಗ ಹರಾಜಿ ಮಾಡಲಾದ ವಾಹನಗಳ ವಿವರಗಳು ಹಾಗೂ ಅವುಗಳಿಂದ ಸರ್ಕಾರಕ್ಕೆ ಬಂದ ಆದಾಯದ ವಿವರಗಳು ಕೆಳಗಿನಂತೆ ಇರುತ್ತವೆ.

ಕ್ರ.ಸಂ.	ವಾಹನಗಳ ವಿವರ	1993-94	1994-95	1995-96
1.	ಆಟೋ	1	2	3
2.	ಕಾರು	42	16	35
3.	ಟೆಂಪೋ	5	2	2
4.	ಮೋಟಾರ್ ಸೈಕಲ್	8	3	9
5.	ಲಾರಿ	7	2	4
6.	ಸ್ಕೂಟರ್	16	8	7
7.	ಜೀಪು	15	1	22
8.	ಜೈಕ್	2	-	-
9.	ಕೈನೆಟಿಕ್ ಹೊಂಡ	1	-	-
10.	ಎತ್ತಿನ ಗಾಡಿ	2	-	25
11.	ದೋಣಿ	-	1	-
	ವಾಹನಗಳ ಹರಾಜಿನಿಂದ ಬಂದ ಹಣ	10,84,967	6,17,11615,	59,319

ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

738 - ಶ್ರೀ ಎಂ.ಸಿ ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಸಾಕಷ್ಟು ವೈದ್ಯರು ಮತ್ತು ಸಿಬ್ಬಂದಿ ಇಲ್ಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹುದ್ದೆಗಳು (ವೈದ್ಯರು ಮತ್ತು ಇತರೆ ಸಿಬ್ಬಂದಿ ಸೇರಿ) ಈಗ ಖಾಲಿ ಇವೆ.